**2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 87 /2021**

P.W : 2
C.W: 2

**ದಿನಾಂಕ 08.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| **ಹೆಸರು** | : | ರಂಗಮ್ಮ |
| **ಗಂಡನ ಹೆಸರು** | : | ಲೇಟ್ ನರಸಿಂಹಮೂರ್ತಿ |
| **ವಯಸ್ಸು** | : | 66 ವರ್ಷ |
| **ವೃತ್ತಿ** | : | ವ್ಯವಸಾಯ |
| **ವಾಸಸ್ಥಳ** | : | ನಾಗವಲ್ಲಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಅರೋಪಿಗಳನ್ನು ಬೆಂಗಳೂರು ಬಂಧಿ ಖಾನೆಯಿಂದ ವಿ.ಸಿ ಮೂಲಕ ಹಾಜರುಪಡಿಸಿದ್ದು ಆತನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಚಾ.ಸಾ.1 ನನ್ನ ಮಗ. ನನಗೆ ಒಟ್ಟು 6 ಜನ ಮಕ್ಕಳು. ಆ ಪೈಕಿ ನಾಲ್ವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನಾನು ನನ್ನ ಕೊನೆಯ ಮಗ ರಾಘವೇಂದ್ರನ ಜೊತೆ ವಾಸವಿದ್ದೇನೆ. 5 ವರ್ಷಗಳಿಂದ ನಾನು ರಾಘವೇಂದ್ರನ ಜೊತೆ ವಾಸವಿದ್ದೇನೆ. ನಾನು ಇಲ್ಲಿಗೆ ಸುಮಾರು 5 ವರ್ಷದ ಹಿಂದೆ ಮಧ್ಯಾಹ್ನ 02.30 ಗಂಟೆ ಸುಮಾರಿಗೆ ಮಹಿಮನಪಾಳ್ಯ ಬಳಿ ಇರುವ ನಮ್ಮ ಜಮೀನಿನಲ್ಲಿ ಅವರೇಕಾಳು ಮತ್ತು ಅಲಸಂಡೇ ಕಾಳು ಕಿತ್ತುಕೊಂಡು ಬರಲು ನಮ್ಮ ಮನೆಯಿಂದ ಹೋದೆನು. ಆಗ ನಾನು ತೋಟದ ಬಳಿ ಹೋಗಿದ್ದೆ. ನಾನು ದಾರಿಯಲ್ಲಿ ಹೋಗುವಾಗ ನನ್ನ ಮಾಂಗಲ್ಯ ಸರವನ್ನು ಪರ್ಸ್ ಗೆ ಹಾಕಿ ಜಾಕೆಟ್ ನಲ್ಲಿ ಹಾಕಿಕೊಂಡೆ. ನಾನು ತೋಟದ ಬಳಿ ಹೋಗುವಾಗ ನನ್ನ ಹಿಂದೆ ಗಾಡಿ ತೆಗೆದುಕೊಂಡು ಯಾರೋ ಇಬ್ಬರು ಬಂದರು. ಒಬ್ಬರು ಗಾಡಿಯನ್ನು ನಿಲ್ಲಿಸಿ ಒಬ್ಬರು ಗಾಡಿ ಮೇಲೆ ಕುಳಿತಿದ್ದರು, ಮತ್ತೊಬ್ಬರು ನನ್ನ ಬಳಿ ಬಂದರು. ಆಗ ನಾನು ಜೋರಾಗಿ ಕೂಗಿಕೊಂಡೆನು. ಆಗ ಅವರು ಸರ ಕೊಡು ಕೊಡು ಎಂದು ಕೇಳಿದರು. ಆಗ ಚಾಕುವಿನಿಂದ ನನ್ನ ತಲೆಗೆ ಹೊಡೆದು ನನ್ನ ಪರ್ಸ್ ನ್ನು ಸರ ಸಮೇತ ಕಿತ್ತು ಕೊಂಡರು.

ನಾನು ಅಲ್ಲಿಂದ ಸ್ವಲ್ಪ ದೂರ ಹೋಗಿ ನಮ್ಮ ಕೋಳಿ ಫಾರಂನ ಬಾಗಿಲಿನ ಬಳಿ ಕುಳಿತುಕೊಂಡೆ ಆಗ ನನಗೆ ಹೆಚ್ಚು ರಕ್ತ ಸ್ರಾವವಾಗಿ ಪ್ರಜ್ಞೆ ತಪ್ಪಿತ್ತು. ಕುರಿ ಮೇಯಿಸುವ ಹುಡುಗರು ನನ್ನನ್ನು ನೋಡಿ ನನ್ನ ಮೊಮ್ಮಗನಿಗೆ ತಿಳಿಸಿರುತ್ತಾರೆ. ನನಗೆ ಪ್ರಜ್ಞೆ ಬಂದಾಗ ನಾನು ಬೆಂಗಳೂರಿನ ಆಸ್ಪತ್ರೆಯಲ್ಲಿ ಇದ್ದೆ. ನಂತರ ನನ್ನ ಮಗ ದೂರನ್ನು ಕೊಟ್ಟಿರುತ್ತಾನೆ. ಪೋಲೀಸರು ಈ ಬಗ್ಗೆ ನನ್ನ ಹೇಳಿಕೆ ಪಡೆದಿರುತ್ತಾರೆ. ನನ್ನ ಸರ 40 ಗ್ರಾಂ ತೂಕ ಇತ್ತು. 6 ತಿಂಗಳ ನಂತರ ದೊಡ್ಡ ಬಳ್ಳಾಪುರ ಪೋಲೀಸರು ನಮ್ಮನ್ನು ಕರೆದು ನನ್ನ ಸರವನ್ನು ತೋರಿಸಿರುತ್ತಾರೆ. ನಾನು ಅದನ್ನು ಗುರುತಿಸಿರುತ್ತೇನೆ. ಆಗ ಸದರಿ ಸರ 25 ಗ್ರಾಂ ಇತ್ತು. ಪೋಲೀಸರು ಸರ ಕಿತ್ತುಕೊಂಡು ಹೋದವರ ಹೆಸರು ಹೇಳಿರುತ್ತಾರೆ ಆದರೆ ಈಗ ಅವರ ಹೆಸರುಗಳು ನೆನಪಿರುವುದಿಲ್ಲ. ನಂತರ ನಾನು ನನ್ನ ಸರವನ್ನು ಬಿಡಿಸಿಕೊಂಡಿರುತ್ತೇನೆ. ಪೋಟೋಗಳನ್ನು ಈಗ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ನನ್ನ ಸರವನ್ನು ವಶಕ್ಕೆ ಕೊಡುವ ಕಾಲಕ್ಕೆ ದೊಡ್ಡ ಬಳ್ಳಾಪುರ ಪೋಲೀಸರು ಮಹಜರ್ ಮಾಡಿದರು.

**ವಾಟೀ ಸವಾಲು ಆರೋಪಿತರು ವಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.

KATK010033182021

3 SC 87/2021
PW..2

**2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**
**ಎಸ್.ಸಿ. ನಂ. 87 /2021**

P.W : 2
C.W: 2

**ದಿನಾಂಕ 24.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**
**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎನ್.ಆರ್.ಟಿ. ವಕೀಲರಿಂದ:**

2. 3 ರಿಂದ 4 ವರ್ಷಗಳ ಹಿಂದೆ ನನ್ನ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ. ನಾನು ಹೊಲದ ಬಳಿ ಹೋಗುತ್ತಿದ್ದಾಗ ಬೇರೆ ಯಾರೋ ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಗಲಾಟೆ ಮಾಡುತ್ತಿದ್ದವನ್ನು ನಾನು ಬಿಡಿಸಲು ಹೋದಾಗ ಅಲ್ಲಿದ್ದ ಬೇರೆ ಯಾರೋ ನನ್ನ ಚೈನನ್ನು ಕಿತ್ತುಕೊಂಡು ಹೋಗಿದ್ದರು ನನಗೆ ಅವರು ಪರಿಚಯಸ್ಥರಿದ್ದ ಕಾರಣ ಅವರ ಮೇಲೆ ದೂರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ನಮ್ಮ ಊರಿನಲ್ಲಿ ನೆಂಟಸ್ಥನ ಇದೆ ಎಂದರೆ ನನಗೆ ಗೊತ್ತಿಲ್ಲ. ಮಹಜರ್ ಮಾಡಕು ದೊಡ್ಡಬಳ್ಳಾಪುರ ಪೋಲೀಸರು ಬಂದಿದ್ದರು, ಆದರೆ ಹೆಬ್ಬೂರು ಪೋಲೀಸರು ಬಂದಿರಲಿಲ್ಲ ಎಂದರೆ ಸರಿ. ನಾನು ದೂರು ಕೊಡುವಾಗ 40 ಗ್ರಾಂ ಚೈನ್ ಇದೆ ಎಂದು ಹೇಳಿದ್ದು ಬಿಡಿಸಿಕೊಳ್ಳುವಾಗ 25 ಗ್ರಾಂ ಇದ್ದಂತಹ ಚೈನು ನನ್ನನೇ ಇರುತ್ತದೆ ಎಂದು ಸುಳ್ಳು ಹೇಳಿ ಬಿಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯವಿದ್ದ ಕಾರಣ ಉದ್ದೇಶಪೂರ್ವಕವಾಗಿ ಅವರ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.